# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿ12(4ಎ)ಪಿಆರ್/448/11-12
19-20

ಆಯುಕ್ತರವರ ಕಛೇರಿ
ಬೃಹತ್ ಮಹಾನಗರ ಪಾಲಿಕೆ ಕಛೇರಿಗಳು,
ಬೆಂಗಳೂರು, ದಿನಾಂಕ: 3/10/19

**ಸುತ್ತೋಲೆ**

ವಿಷಯ: ಆರೋಗ್ಯಾಧಿಕಾರಿ(ಕ್ಲಿನಿಕಲ್) ಹುದ್ದೆಗೆ ಮುಂಬಡ್ತಿ ನೀಡುವ ಬಗ್ಗೆ.

ಉಲ್ಲೇಖ:
1) ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಆದೇಶ ಸಂಖ್ಯೆ: ಸಿಆಸುಇ 186 ಎಸ್ಆರ್ಎಸ್ 2018, ದಿನಾಂಕ: 27-02-2019
2) ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಆದೇಶ ಸಂಖ್ಯೆ: ಸಿಆಸುಇ 186 ಎಸ್ಆರ್ಎಸ್ 2018, ದಿನಾಂಕ: 15-05-2019.
3) ಈ ಕಛೇರಿ ಆದೇಶ ಸಂಖ್ಯೆ: ಬಿ12(4ಎ)ಪಿಆರ್/278/11-12/19-20, ದಿ: 14-08-2019.

-------

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ ಆರೋಗ್ಯ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಅರ್ಹ ವೈದ್ಯಕೀಯ ಅಧೀಕ್ಷಕರು ವೃಂದದಿಂದ ಖಾಲಿ ಇರುವ ಆರೋಗ್ಯಾಧಿಕಾರಿಗಳು (ಕ್ಲಿನಿಕಲ್) ವೃಂದಕ್ಕೆ ಮುಂಬಡ್ತಿಯನ್ನು ನೀಡಲು ಉದ್ದೇಶಿಸಲಾಗಿರುವ ಹಿನ್ನೆಲ್ಲೆಯಲ್ಲಿ ವೈದ್ಯಕೀಯ ಅಧೀಕ್ಷಕರುಗಳ ಸೇವಾ ಪುಸ್ತಕ ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವ ಮೂಲ ಪ್ರಮಾಣ ಪತ್ರಗಳು, 3 ವರ್ಷಗಳ ವಾರ್ಷಿಕ ಕಾರ್ಯನಿರ್ವಹಣಾ (2016-17, 2017-18, 2018-19) ವರದಿಗಳೊಂದಿಗೆ ಮತ್ತು ಮುಂಬಡ್ತಿ ಇಚ್ಚೆ ಇರುವ ಬಗ್ಗೆ / ಇಲ್ಲದಿರುವ ಬಗ್ಗೆ ಐಚ್ಚಿಕತೆ ಪತ್ರವನ್ನು ಈ ಸುತ್ತೋಲೆ ಹೊರಡಿಸಿದ 7 ದಿನಗಳೊಳಗಾಗಿ ಆಯುಕ್ತರ ಕಛೇರಿ ಆಡಳಿತ ಶಾಖೆಗೆ ಕಳುಹಿಸಿಕೊಡಲು ಹಾಗೂ ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ಭರ್ತಿಮಾಡಿ ಬಟವಾಡೆ ಅಧಿಕಾರಿಗಳ ದೃಢೀಕರಣದೊಂದಿಗೆ ಈ ಕಛೇರಿಗೆ ಕಳುಹಿಸಲು ಸೂಚಿಸಿದೆ. ಮೇಲ್ಕಂಡ ಸೂಚನೆಗಳಂತೆ ಸಮರ್ಪಕವಾಗಿ ಪರಿಶೀಲಿಸಿ ಮಾಡದೇ ವರದಿಯನ್ನು ಸಲ್ಲಿಸುವ ಬಟವಾಡೆ ಅಧಿಕಾರಿಗಳನ್ನೇ ನೇರ ಜವಾಬ್ದಾರರನ್ನಾಗಿ ಮಾಡಲಾಗುವುದು.

ಉಪ ಆಯುಕ್ತರು (ಆಡಳಿತ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
3/10/19. 3/10/19 3/10/19

ಪ್ರತಿಯನ್ನು : ಪೂಜ್ಯ ಮಹಾಪೌರರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ಮಾನ್ಯ ಉಪ ಮಹಾಪೌರರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ಆಯುಕ್ತರು / ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ಎಲ್ಲಾ ವಲಯ ಅಪರ / ಜಂಟಿ ಆಯುಕ್ತರು ರವರಿಗೆ ಕಳುಹಿಸಿದೆ.
: ಮುಖ್ಯ ಆರೋಗ್ಯಾಧಿಕಾರಿಗಳು (ಕ್ಲಿನಿಕಲ್) ರವರಿಗೆ ಕಳುಹಿಸಿದೆ.
: ಆರೋಗ್ಯಾಧಿಕಾರಿಗಳು (ಕ್ಲಿನಿಕಲ್) (ಪೂರ್ವ / ದಕ್ಷಿಣ) ರವರಿಗೆ ಕಳುಹಿಸಿದೆ.
: ಅಧ್ಯಕ್ಷರು, ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸ್ಥಾಯಿ ಸಮಿತಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
: ಕೌನ್ಸಿಲ್ ಕಾರ್ಯದರ್ಶಿಯವರಿಗೆ ಕಳುಹಿಸುತ್ತಾ, ಎಲ್ಲಾ ಸ್ಥಾಯಿ ಸಮಿತಿಗಳ ಅಧ್ಯಕ್ಷರುಗಳಿಗೆ, ಆಡಳಿತ ಪಕ್ಷದ ನಾಯಕರು, ವಿರೋಧ ಪಕ್ಷದ ನಾಯಕರುಗಳಿಗೆ ಕಳುಹಿಸಿಕೊಡಲು ಕೋರಿದೆ.
: ಮುಖ್ಯ ಲೆಕ್ಕಾಧಿಕಾರಿ / ಮತ್ತು ಎಲ್ಲಾ ವಲಯದ ಸಹಾಯಕ ನಿಯಂತ್ರಕರು (ಹಣಕಾಸು) ರವರಿಗೆ ಕಳುಹಿಸಿದೆ.
: ಉಪ ನಿಯಂತ್ರಕರು (ಹಣಕಾಸು) ರವರಿಗೆ ಕಳುಹಿಸಿದೆ.
: ಮಾಹಿತಿ ತಂತ್ರಜ್ಞಾನ ಸಲಹೆಗಾರರು ರವರಿಗೆ ಕಳುಹಿಸುತ್ತಾ, ಸದರಿ ಸುತ್ತೋಲೆಯನ್ನು ಪಾಲಿಕೆಯ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸಲು ಸೂಚಿಸಿದೆ.
: ಸಂಬಂಧಪಟ್ಟ ಎಲ್ಲಾ ಬಟವಾಡೆ ಅಧಿಕಾರಿಗಳಿಗೆ : ಕಛೇರಿ ಪ್ರತಿ.

ನಮೂನ

**ವೈದ್ಯಕೀಯ ಅಧೀಕ್ಷಕರು ವೃಂದದಿಂದ ಆರೋಗ್ಯಾಧಿಕಾರಿಗಳ (ಕ್ಲಿನಿಕಲ್) ಹುದ್ದೆಗೆ ಮುಂಬಡ್ತಿ ನೀಡುವ ತನಿಖಾ ಪಟ್ಟಿ**

| ಕ್ರಮ ಸಂಖ್ಯೆ | ವಿವರಗಳು | |
|---|---|---|
| 1. | ಹೆಸರು | |
| 2. | ಪದನಾಮ | |
| 3. | ಹುಟ್ಟಿದ ದಿನಾಂಕ | |
| 4. | ಕೆಲಸಕ್ಕೆ ಸೇರಿದ ದಿನಾಂಕ | |
| 5. | ಪ್ರವರ್ಗ | |
| 6. | ಪರೀಕ್ಷಾರ್ಥ ಸೇವಾವಧಿಯನ್ನು ಘೋಷಿಸಿಕೊಂಡ ದಿನಾಂಕ | |
| 7. | ವಿದ್ಯಾರ್ಹತೆ | |
| 8. | ಉತ್ತೀರ್ಣರಾಗಿರುವ ಇಲಾಖಾ ಪರೀಕ್ಷೆಗಳ ವಿವರಗಳು | |
| 9. | ಇವರ ವಿರುದ್ಧ ಲೋಕಾಯುಕ್ತ / ಇಲಾಖಾ ವಿಚಾರಣೆ ಬಾಕಿ ಇದೆಯೇ ಅಥವಾ ಇಲ್ಲವೇ ? (ಇದ್ದಲ್ಲಿ ಪ್ರಕರಣದ ವಿವರಗಳನ್ನು ಒದಗಿಸುವುದು) | |
| 10. | ಹೈದ್ರಾಬಾದ್ – ಕರ್ನಾಟಕ ಪ್ರದೇಶಕ್ಕೆ ಸೇರಿದವರಾಗಿರುತ್ತಾರೆಯೇ / ಇಲ್ಲವೇ | |
| 11. | ಷರಾ | |

ಬಟವಾಡೆ ಅಧಿಕಾರಿಗಳು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ